Notice of Privilege. Re : Placing the Pay Commsision Report for discussion on the floor of the House

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಹಣಕಾಸಿನ ವಿಚಾರಕ್ಕೆ ಸಂಬಂಧ ಪಟ್ಟಹಾಗೆ ನಾನು ಪ್ರಿವಿಲೇಜ್ ನೋಟೀಸ್ ಕಳುಹಿಸಿದ್ದೆ.

ಅಧ್ಯಕ್ಷರು.—ಅದು ಇಲ್ಲೇ ಇದೆ;

ಶ್ರೀ ಕಾಗೋಡು ತಿಮ್ಮಪ್ಪ. -ಮಾನ್ಯ ಅಧ್ಯಕ್ಷರೇ, ವೇತನ ಆಯೋಗದ ವರದಿಯನ್ನು ಸರ್ಕಾರ ಪ್ರಕಟಣೆ ಮಾಡುವ ವಿಚಾರದಲ್ಲಿ ತೀರ್ಮಾನ ಮಾಡುವುದಕ್ಕೆ ಮುಂಚೆ ಈ ಸದನದಲ್ಲಿ ಚರ್ಚೆ ಮಾಡಿ ಸದಸ್ಯರ ಅಭಿಪ್ರಾಯ ಪಡೆಯಬೇಕೆಂದು ಹೇಳಿದಾಗ ಮಾನ್ಯ ಹಣಕಾಸಿನ ಸಚಿವರು ಒಂದು ಮಾತನ್ನು ಹೇಳಿದರು. ಈ ಸದನದಲ್ಲಿ ಚರ್ಚೆಗೆ ಸಂಪೂರ್ಣ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದರು. ನಿನ್ನೆ ವೇತನ ಆಯೋಗದ ವರದಿಯನ್ನು ಇಟ್ಟು ಸಂಪೂರ್ಣವಾಗಿ ಈ ಸದನವನ್ನು ಕೈಬಿಟ್ಟಿದ್ದಾರೆ. ಅವರು ಕೊಟ್ಟಿದ್ದ ಅಶ್ವಾಸನೆಗೆ ವಿರುದ್ಧವಾಗಿ ಮಾಡಿದ್ದಾರೆ. ಅವರ ಹೇಳಿಕೆಯ ಸಾರಾಂಶವನ್ನು ನೋಡಿದರೆ ಅದೇ ಒಂದು ಧಾಟಿಯಲ್ಲಿ ಹೇಳಿದ್ದಾರೆ. ಹಿಂದೆ ಅವರು ಕೊಟ್ಟ ಅವರ ವರದಿಯ ಕೊನೇ ಪ್ಯಾರಾದಲ್ಲಿ ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮುಂಚೆ ಈ ಸದನದಲ್ಲಿ ಚರ್ಚೆ ಮಾಡಿ ಎಲ್ಲರ ಅಭಿಪ್ರಾಯವನ್ನು ಪಡೆದು ನಂತರ ತೀರ್ಮಾನಕ್ಕೆ ಬರುತ್ತದೆಂದು ಸ್ಪಷ್ಟವಾಗಿ ಹೇಳಿದ್ದಾರೆ.

ಅಧ್ಯಕ್ಷರು.—ಅವರು ಹೇಳಿರುವಂಥಾದ್ದು ಇಲ್ಲಿಯೇ ಇದೆ ಯಾವಾಗಲೂ ಅವರು ಕಮಿಟಿ ಮಾಡಿಕೊಂಡಿಲ್ಲ. ಒಟ್ಟನಲ್ಲಿ ನೀವು ಕೇಳುತ್ತಾ ಇರುವುದು ಪ್ರಿವಿಲೇಜ್ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಕೊನೇ ಪ್ಯಾರಾದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಅಧ್ಯಕ್ಷರು.—ಅಶ್ವಾಸನೆ ಎನ್ನುವ ಪದವೇ ಇಲ್ಲ. ಅದುದರಿಂದ ಖಂಡಿತವಾಗಿ ಇದು ಪ್ರಿವಿಲೇಜ್ ಆಗುವುದಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರಾದ ಫೋರ್ಡೆಯವರು ಏನು ಹೇಳಿದರು ಎಂದರೆ, ಬೇಸಿಕ್ ಸ್ಟ್ರಕ್ಚರ್ ಏನು ಇದೆ ಅದನ್ನು ಓದಿ ಹೇಳಿದರು.

MADAM SPEAKER.—That does not amount to breach of privilege at all. Let us finish off the work listed in the agenda today.

SRI KAGODU THIMMAPPA.—I have marked out some portion I will if permitted read out that portion for the benefit of the House.

MADAM SPEAKER.—We have got better work to do.

SRI KAGODU THIMMAPPA.—I want to bring to the notice of the House where the Finance Minister has made a statement to the House categorically stating that this House will be given full scope for discussion before any decision is taken. I would request the Hon'ble Speaker to read out the last para of the Finance Minister's speech.

MADAM SPEAKER.—It is like this :

"So far as I am concerned, I have not the slightest intention of doing something without consulting the members. The views of the hon'ble members will be most welcome. In what particular form it is going to be discussed is really left to the hon'ble speaker and the

members who are anxious to speak. Therefore I am not coming out with any s ecific manner in which the views should be taken. Certainly it is not my intention or the intention of the Government to take a decision without fulles consideration of everybodys' views especially the views of the hon'ble members of this House."

KARNATAKA CIVIL SERVICES (CLASSIFICATION AND SCALES OF PAY OF NON GAZETTED JUNIOR ENGINEERS OF PUBLIC WORKS DEPARTMENT) SECOND AMENDMENT) BILL, 1976 AS PASSED BY THE L.C.

Motion to Consider

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ (ಲೋಕೋಪಯೋಗಿ ಶಾಖೆಯ ಮಂತ್ರಿಗಳು):—

ಮಾನ್ಯ ಅಧ್ಯಕ್ಷಣಿಯವರೇ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1976ನೇ ಇಸವಿಯ ಕರ್ನಾಟಕ ರಾಜ್ಯದ ಸಿವಿಲ್ ಸೇವೆಗಳಿಗೆ (ಲೋಕೋಪಯೋಗಿ ಇಲಾಖೆಯ ಪದವೀಧರರಲ್ಲದ ಜೂನಿಯರ್ ಇಂಜಿನಿಯರುಗಳ ವರ್ಗೀಕರಣ ಹಾಗೂ ವೇತನ ಶ್ರೇಣಿಗೆ ಸಂಬಂಧಿಸಿದ (ಎರಡನೇ ತಿದ್ದುಪಡಿ) ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಸೂಚಿಸುತ್ತೇನೆ.

ಅಧ್ಯಕ್ಷರು.—1976ನೇ ಇಸವಿಯ ಕರ್ನಾಟಕ ರಾಜ್ಯದ ಸಿವಿಲ್ ಸೇವೆಗಳಿಗೆ (ಲೋಕೋಪಯೋಗಿ ಇಲಾಖೆಯ ಪದವೀಧರರಲ್ಲದ ಜೂನಿಯರ್ ಇಂಜಿನಿಯರುಗಳ ವರ್ಗೀಕರಣ ಹಾಗೂ ವೇತನ ಶ್ರೇಣಿಗೆ) ಸಂಬಂಧಿಸಿದ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

† ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅಧ್ಯಕ್ಷರೇ, ಈಗಾಗಲೇ ಈ ಕರ್ನಾಟಕ ಸಿವಿಲ್ ಸೇವೆಗಳಿಗೆ (ಲೋಕೋಪಯೋಗಿ ಇಲಾಖೆಯ ಪದವೀಧರರಲ್ಲದೆ ಜೂನಿಯರ್ ಇಂಜಿನಿಯರ್‌ಗಳ ವರ್ಗೀಕರಣ ಹಾಗೂ ವೇತನ ಶ್ರೇಣಿಗೆ) ಸಂಬಂಧಿಸಿದ (ಎರಡನೇ ತಿದ್ದುಪಡಿ) ವಿಧೇಯಕದ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಚರ್ಚೆಗೆ ತೆಗೆದುಕೊಂಡು ಅದು ಅಂಗೀಕಾರ ಕೂಡ ಆಗಿದೆ. ಆದುದರಿಂದ ಇದರ ಪೂರ್ವ ಇತಿಹಾಸವನ್ನು ನಾನು ನಿವಿಷದಲ್ಲಿ ಹೇಳಿ ಮುಗಿಸುತ್ತೇನೆ. ನಾವು ಈ ಒಂದು ತಿದ್ದುಪಡಿ ಆಧ್ಯಾದೇಶ ಹೊರಡಿಸಿ ಅದರ ಬದಲು ಒಂದು ಕಾಯಿದೆ ಮಾಡಿದ್ದೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. 1961ನೇ ಇಸವಿ ಹಾಗೂ 1967ನೇ ಇಸವಿಯಲ್ಲಿ ಶ್ರೇಷ್ಠ ನ್ಯಾಯಾಲಯದ ಮುಂದೆ ಎರಡು ರಿಟ್‌ಗಳು ಹೋದವು ಅಲ್ಲಿ ಅವರು ಕೊಟ್ಟಂತಹ ನಿರ್ದೇಶನ, ಈ ಹೊಸ ಸಮಾಕರಣ ಏಕಸೇವಾ ವ್ಯಂದ ರೀತಿ ಪರಿಗಣಿಸಬೇಕು ಎಂದು. ನಂತರ ಈ ಎರಡು ವರ್ಗಗಳ ಅಭಿಯಂತರರಿಗೂ ಒಂದೇ ರೀತಿ ಸಮಾಕರಣ ಮಾಡಬೇಕು, ಎಂದು ಹೇಳಿದರು. ಅದನ್ನು ಅನುಸರಿಸಿ ಸರ್ಕಾರದವರು ಪದವೀಧರರಿಗೆ ಯಾವ ಸಂಬಳ ಕೊಡಲಾಗುತ್ತಿದೆ. ಪದವೀಧರರಲ್ಲದವರಿಗೆ ಯಾವರೀತಿ ಸಂಬಳ ಕೊಡಲಾಗುತ್ತಿದೆ ಎಂದು 5-3-1971ರಲ್ಲಿ ಆರ್ಡರ್ ಹೊರಡಿಸಿದ್ದು ನಂತರ 196 ನೇ ಇಸವಿಯಲ್ಲಿ ಶ್ರೇಷ್ಠ ನ್ಯಾಯಾಲಯದ ಅಂತಿಮ ಅಂತರ ರಾಜ್ಯ ಜೇಷ್ಠತೆಯ ಪಟ್ಟಿಯನ್ನು ಎರಡು ವರ್ಗಗಳಿಗೆ ನವುಂಡಿಸಿದ ಪಟ್ಟಿಯನ್ನು ರದ್ದುಮಾಡಿ ಪುನಃ ಇದನ್ನು ಕೇಂದ್ರಸರ್ಕಾರ ಪರಿಶೀಲನೆ ಮಾಡಬೇಕು ಎಂದು ನಿರ್ದೇಶನ ಕೊಟ್ಟರು, ಈ ತೀರ್ಮಾನದ ಫಲವಾಗಿ, ಪದವೀಧರ ಅಭಿಯಂತ್ರರಿಗೆ ಕೊಡತಕ್ಕ ಸಂಬಳ ಏನು ಇದೆ, ಅದನ್ನು ಪದವೀಧರರಲ್ಲದ ಅಭಿಯಂತ್ರರಿಗೂ ಕೂಡ ಕೊಡುವುದು ಸರಿಯಲ್ಲ ಎಂದು ಒಂದು ತೀರ್ಮಾನಕ್ಕೆ ಬಂದು ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿ ಹಿಂದಿನದು ತೆಗೆದುಕೊಂಡೆವು 1-7-57 ಅಂದರೆ ರಿಟ್‌ನಂಬರ್ 1757, 1967ರಲ್ಲಿ ಒಂದು ಆದೇಶ ಕೊಟ್ಟಿದ್ದರು ಅದರ ಪ್ರಕಾರ ಇಂತಹ ಒಂದು ಶಾಸನ ಮಾಡಿ ಎರಡು ವರ್ಗಗಳಲ್ಲಿ ಇರತಕ್ಕ ಅಭಿಯಂತ್ರರಿಗೂ ಸಂಬಳ ಏನು